# ವೇದಾಂತದ ಮೂರು ತತ್ತ್ವಸಿದ್ಧಾಂತಗಳು ಹಾಗೂ ಶ್ರೀರಾಮಕೃಷ್ಣರ ಸಮನ್ವಯ ಸಿದ್ಧಾಂತ

ಸ್ವಾಮಿ ರಾಮಕೃಷ್ಣಾನಂದ

(ದಕ್ಷಿಣ ಭಾರತದಲ್ಲಿ ರಾಮಕೃಷ್ಣ-ವಿವೇಕಾನಂದ ಭಾವಧಾರೆಯನ್ನು ಹರಡಿದ ಪೂಜ್ಯ ಸ್ವಾಮಿ ರಾಮಕೃಷ್ಣಾನಂದರು, ಶ್ರೀರಾಮಕೃಷ್ಣ ಪರಮಹಂಸರ ನೇರ ಶಿಷ್ಯರು. ವೇದಾಂತದ ಮೂರು ಸಿದ್ಧಾಂತಗಳಾದ ದ್ವೈತ, ವಿಶಿಷ್ಟಾದ್ವೈತ ಹಾಗೂ ಅದ್ವೈತಗಳನ್ನು ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಅನುಭೂತಿಗಳೊಂದಿಗೆ ತುಲನಾತ್ಮಕವಾಗಿ ಪರಿಶೀಲಿಸಿ ಅವರು ೧೯೦೩ರ ಅಕ್ಟೋಬರ್ ೮ರಂದು ಮೈಸೂರು ಸಂಸ್ಕೃತ ಕಾಲೇಜಿನಲ್ಲಿ ಸಂಸ್ಕೃತ ಭಾಷೆಯಲ್ಲಿ ಮಾತನಾಡಿದ್ದರು. ಅಂದಿನ ಅವರ ಪಾಂಡಿತ್ಯಪೂರ್ಣ ಪ್ರವಚನದ ಶೀರ್ಷಿಕೆ 'ಧರ್ಮಸಮನ್ವಯ'. ಇದರ ಕನ್ನಡ ಅನುವಾದವನ್ನು ಮೈಸೂರಿನ ಕೆ.ಎಲ್. ಪ್ರಸನ್ನಾಕ್ಷಿ ಅವರು ಮಾಡಿದ್ದಾರೆ. ಚೆನ್ನೈ ರಾಮಕೃಷ್ಣ ಮಠದ ಪ್ರಕಟನೆ *For Thinkers on Education* ಗ್ರಂಥದ ಪರಿಶಿಷ್ಟದಲ್ಲಿ ಸಂಸ್ಕೃತದ ಮೂಲ ರೂಪವನ್ನು ನೀಡಲಾಗಿದೆ. ಫೆಬ್ರವರಿ ೨೦೦೫ರ 'ವೇದಾಂತ ಕೇಸರಿ' ಪತ್ರಿಕೆಯಲ್ಲಿ ಇದರ ಇಂಗ್ಲಿಷ್ ಅನುವಾದ ಪ್ರಕಟವಾಗಿತ್ತು.)


ಶ್ರೇಷ್ಠ ವಿದ್ವಾಂಸರೆ,

ಭಗವಂತನ ಅನುಗ್ರಹಮಾತ್ರದಿಂದಲೇ ತಮ್ಮಂತಹ ಸಜ್ಜನರೊಡನೆ ನಮ್ಮಂತಹ ಕಿರಿಯರ ಸಹವಾಸವು ಉಂಟಾಗುವುದು. ತತ್ತ್ವವನ್ನು ತಿಳಿಯುವ ಆಸೆ ಹುಟ್ಟುವುದು ಮತ್ತು ತತ್ತ್ವದ ಅರಿವಾಗುವುದು ಸಜ್ಜನರ ಸಹವಾಸದಿಂದಲೇ. ಈ ತತ್ತ್ವದ ಅರಿವಾದಾಗಲೇ ಮನುಷ್ಯ ಆಧಿಭೌತಿಕ, ಆಧಿದೈವಿಕ ಮತ್ತು ಆಧ್ಯಾತ್ಮಿಕ ಎಂಬ ಮೂರು ವಿಧವಾದ ತಾಪಗಳಿಂದ ಬಿಡುಗಡೆ ಹೊಂದುವುದು. (ಕ್ರೂರ ಪ್ರಾಣಿ, ದುಷ್ಟ ಜನ, ಶತ್ರು ಮೊದಲಾದ ಜೀವಿಗಳಿಂದ ಉಂಟಾಗುವ ದುಃಖ ಆಧಿಭೌತಿಕ. ಭೂಕಂಪ, ಪ್ರವಾಹ ಮೊದಲಾದ ಪ್ರಾಕೃತಿಕ ವಿಕೋಪಗಳಿಂದ ಉಂಟಾಗುವ ದುಃಖ ಆಧಿದೈವಿಕ. ಶಾರೀರಿಕ ರೋಗರುಜಿನಗಳು, ಮಾನಸಿಕ ಅಸ್ವಸ್ಥತೆ ಇವೇ ಮೊದಲಾದ ಮನುಷ್ಯನ ಮನಸ್ಸು-ಶರೀರಗಳಿಗೆ ಸಂಬಂಧಿಸಿದ ದುಃಖಗಳು ಆಧ್ಯಾತ್ಮಿಕ.) ಅನಂತರವೇ ಮನುಷ್ಯ ಬಹು ಶ್ರೇಷ್ಠವಾದ ದಿವ್ಯಾನಂದವನ್ನು ಪಡೆಯುತ್ತಾನೆ. ಇದನ್ನು ನಿಶ್ರೇಯಸ ಎನ್ನುವರು. ಸಜ್ಜನರಲ್ಲದವರ ಸಹವಾಸ ಆಸೆಗಳನ್ನು ಹುಟ್ಟಿಸಿದರೆ ಸಜ್ಜನರ ಸಹವಾಸ ಆಸೆಗಳನ್ನು ನಾಶಮಾಡುತ್ತದೆ. ಆದುದರಿಂದಲೇ—

**ಸತ್ಸಂಗತ್ವೇ ನಿಸ್ಸಂಗತ್ವಂ ನಿಸ್ಸಂಗತ್ವೇ ನಿರ್ಮೋಹತ್ವಂ ।**
**ನಿರ್ಮೋಹತ್ವೇ ನಿಶ್ಚಲ-ತತ್ತ್ವಂ ನಿಶ್ಚಲ-ತತ್ತ್ವೇ ಜೀವನ್ಮುಕ್ತಿಃ ॥**

ಸತ್ಸಂಗ ಅಸಂಗಕ್ಕೂ, ಅಸಂಗ ಮೋಹನಾಶಕ್ಕೂ, ಮೋಹನಾಶ ಶಾಶ್ವತ ತತ್ತ್ವಜ್ಞಾನಕ್ಕೂ, ತತ್ತ್ವಜ್ಞಾನ ಮುಕ್ತಿಗೂ ಕಾರಣವಾಗುವುದೆಂದು ಹೇಳಲಾಗಿದೆ. ಹಾಗಿದ್ದ ಮೇಲೆ ಸಜ್ಜನರ ಸಹವಾಸವೇ ಮೋಕ್ಷದ ಬಾಗಿಲನ್ನು ತೆರೆಯುವ ಕೀಲಿಕೈ ಎಂದು ಮತ್ತೆ ಹೇಳಬೇಕೇನು?

ಭಾರತದೇಶದಲ್ಲಿ ಈ ಯುಗದಲ್ಲಿ ಮೂವರು ತತ್ತ್ವನಿರ್ಣಯಕಾರರು ಹುಟ್ಟಿದ್ದರು. ಅವರೆಲ್ಲರೂ ದಕ್ಷಿಣ ಭಾರತದಲ್ಲಿ ಅವತರಿಸಿ ಅದಕ್ಕೆ ಗೌರವ ಹಾಗೂ ಮೆರುಗನ್ನು ನೀಡಿದರು. ಸಾಕ್ಷಾತ್ ಶಿವಸ್ವರೂಪಿಗಳಾದ ಶಂಕರಾಚಾರ್ಯರು ಅವರಲ್ಲಿ ಮೊದಲಿಗರು. "ಬ್ರಹ್ಮವು ಸತ್ಯ, ಜಗತ್ತು ಮಿಥ್ಯೆ, ಜೀವವು ಬ್ರಹ್ಮವೇ, ಬೇರೆ ಅಲ್ಲ", ಎಂದು ಈ ಮಹಾನ್ ದಾರ್ಶನಿಕರು ಪ್ರಮಾಣಗಳೊಡನೆ ಸ್ಪಷ್ಟಪಡಿಸಿರುವರು. ಸಚ್ಚಿದಾನಂದ ಸ್ವರೂಪವಾದ ಪರಬ್ರಹ್ಮವೊಂದೇ ನಿತ್ಯವಾದುದು; ಎಲ್ಲೆಡೆ ವ್ಯಾಪಿಸಿರುವ, ಅಚಲವಾದ ಅದು ಎಂದೆಂದೂ ನಾಶವಾಗದ್ದು, ಕ್ಷಯಿಸದ್ದು, ಬದಲಾಗುವ ಎಲ್ಲದರ ನಡುವೆ ಬದಲಾಗದೆ ದೇಶ, ಕಾಲ, ಕಾರಣಗಳನ್ನು ಮೀರಿರುವಂತಹುದು. ದೇಶ, ಕಾಲ, ಕಾರಣಗಳಿಂದ ಹುಟ್ಟುವ ಜಗತ್ತು ಅನಿತ್ಯವಾದುದು. ಅದು ಮಿಥ್ಯೆ, ಆರಂಭ-ಅಂತ್ಯಗಳು ಇರುವಂತಹುದು. ಬಿಸಿ-ತಂಪು, ಸುಖ-ದುಃಖ ಈ ಭಾವಗಳಂತೆ ಬದಲಾಗುತ್ತಾ ಇರುವಂತಹುದು ಎಂದು 'ಮಿಥ್ಯಾ' ಶಬ್ದಕ್ಕೆ ಅರ್ಥವೇ ಹೊರತು 'ಶೂನ್ಯ' ಎಂಬ ಅರ್ಥವಲ್ಲ ಎಂದು ಶಂಕರರು ಸ್ಪಷ್ಟಪಡಿಸಿರುವರು. ಈ ಅರ್ಥವನ್ನೇ ಎಲ್ಲಾ ಕಡೆಯೂ ಗ್ರಹಿಸಬೇಕು. ಆ ಬ್ರಹ್ಮವೇ ಜೀವದ ಸ್ವರೂಪ. ಈ ಜೀವವು ಆದಿಯಿಲ್ಲದ ಭ್ರಮೆಯ ಕಾರಣದಿಂದಾಗಿ, ದೇಹವು ತನ್ನದು, ತಾನು ದೇಹ ಎಂಬ ಅಭಿಮಾನ ಹೊಂದಿದಾಗ 'ನಾನು ಸ್ಥೂಲಶರೀರಿ' 'ನಾನು ಮುದುಕ', 'ನಾನು ಕುರುಡ', 'ನಾನು ಗೂನ' ಮುಂತಾದ ಭ್ರಮಾತ್ಮಕ ಭಾವನೆಗಳನ್ನು ಹೊಂದಿರುತ್ತದೆ. ಅದೇ ಮನಸ್ಸಿನೊಡನೆ ಏಕತೆಯನ್ನು ಹೊಂದಿದಾಗ 'ನಾನು ಸುಖಿ', 'ನಾನು ದುಃಖಿ' ಇತ್ಯಾದಿ ಮೂಢ ಭಾವನೆಗಳಿಂದ ಕೂಡಿರುತ್ತದೆ. ಹೀಗೆ ತನ್ನ ನಿಜ ಸ್ವರೂಪವನ್ನು ತಿಳಿಯದೆ ಹುಟ್ಟು-ಸಾವು, ರೋಗ-ರುಜಿನ,



ಸ್ವಾಮಿ ರಾಮಕೃಷ್ಣಾನಂದರು

ಮುಪ್ಪು-ಭ್ರಾಂತಿ ಮುಂತಾದ ದುಃಖಪರಂಪರೆಗಳಿಂದ ನಿಬಿಡವಾಗಿರುವ, ವಿಷಪೂರಿತ ಇಂದ್ರಿಯ ಸುಖಭೋಗಗಳನ್ನು ಅನುಭವಿಸಬೇಕೆಂಬ ಆಸೆಯಿಂದ ತುಂಬಿರುವ ಸಂಸಾರವೆಂಬ ನೀರಿರುವ ಬಾವಿಯಲ್ಲಿ ಬಿದ್ದು, ನಾನಾವಿಧವಾದ ದುಃಖಗಳನ್ನು ಅನುಭವಿಸುತ್ತ ಜೀವನು ಪ್ರಪಂಚವನ್ನೇ ನುಂಗುವ ಕಾಲಕ್ಕೆ ವಶನಾಗುತ್ತಾನೆ. ಅವನನ್ನು ಕಾಲ ನುಂಗಿದ್ದರೂ ತಾನೇ ಸೃಷ್ಟಿಸಿದ 'ಕರ್ಮ'ದ ಕಾರಣದಿಂದ ಸಂಸಾರದಲ್ಲಿ ಬಿದ್ದು ದುಃಖಪರಂಪರೆಗಳನ್ನು ಮತ್ತೆ ಮತ್ತೆ ಅನುಭವಿಸುತ್ತಾನೆ. ಎಂದೋ ಕಾಲದ ಗತಿಯಲ್ಲಿ ಅವನ ಒಳ್ಳೆಯ ಕರ್ಮಗಳು ಪಕ್ವವಾದಾಗ ಅವನಿಗೆ ಸಜ್ಜನರ ಸಹವಾಸ ಸಿಗುತ್ತದೆ. ಅವರಿಂದ ಸಾಧನ-ಚತುಷ್ಟಯವನ್ನು ಪಡೆದುಕೊಂಡು ನಿಧಾನವಾಗಿ ತನ್ನ ಅಜ್ಞಾನವನ್ನು ಕಳೆದುಕೊಳ್ಳುತ್ತಾನೆ. (೧. ನಿತ್ಯ-ಅನಿತ್ಯ ವಸ್ತುಗಳನ್ನು ವಿಭಜಿಸಿ ತಿಳಿದುಕೊಳ್ಳುವ ವಿವೇಕ ೨. ಇಹಾಮುತ್ರಫಲಭೋಗವಿರಾಗ—ಜೀವಿಯು ಮಾಡುವ ಕೆಲಸಗಳಿಗೆ ಈ ಲೋಕದಲ್ಲೂ ಪರಲೋಕದಲ್ಲೂ ಫಲಗಳು ತಾನಾಗಿಯೇ ಸಿಗುತ್ತವೆ. ಹಾಗಾಗಿ ಆ ಫಲಗಳಲ್ಲಿ ಅನಾಸಕ್ತಿಯನ್ನು ಸಾಧಿಸುವುದು. ೩. ಷಟ್‌ಸಂಪತ್ತಿ—ಆರು ಸಂಪತ್ತುಗಳು: ಶಮ-ಅಂತಃಕರಣಗಳನ್ನು ನಿಯಂತ್ರಿಸುವುದು, ದಮ-ಬಾಹ್ಯೇಂದ್ರಿಯಗಳನ್ನು ನಿಗ್ರಹಿಸುವುದು, ಉಪರತಿ-ಪ್ರಪಂಚದ ಆಕರ್ಷಣೆಯಿಂದ ಇಂದ್ರಿಯಗಳನ್ನು ಸೆಳೆದುಕೊಳ್ಳುವುದು, ತಿತಿಕ್ಷಾ-ಸಹನೆ, ಶ್ರದ್ಧಾ-ಆಧ್ಯಾತ್ಮಿಕ ಸಂಗತಿಗಳಲ್ಲಿ ನಂಬಿಕೆ, ಸಮಾಧಾನ-ಧ್ಯಾನದಲ್ಲಿ ಮಗ್ನವಾಗುವುದು. ೪.ಮುಮುಕ್ಷುತ್ವ -ಮೋಕ್ಷವನ್ನು ಪಡೆಯಬೇಕೆಂಬ ಬಲವಾದ ಹಂಬಲ. ಇವೇ ಸಾಧನ ಚತುಷ್ಟಯಗಳು. ವೇದಾಂತ ತತ್ತ್ವವನ್ನು ತಿಳಿದುಕೊಳ್ಳಬೇಕು ಎಂದು ಹಂಬಲಿಸುವವನು ಇವುಗಳನ್ನು ಅಭ್ಯಾಸ ಮಾಡಲೇಬೇಕು.) ಸೂರ್ಯೋದಯವಾದಾಗ ಹೇಗೆ ಕತ್ತಲು ತನ್ನಿಂದ ತಾನೇ ದೂರವಾಗುವುದೋ ಹಾಗೇ ಜ್ಞಾನೋದಯವಾದಾಗ ಭ್ರಮೆಯಿಂದ ಉಂಟಾಗಿದ್ದ ಎಲ್ಲಾ ದುಃಖಗಳೂ ದೂರವಾಗುತ್ತವೆ. ಸತ್ಪುರುಷರ ಸೇವೆ ಮಾಡದೆ 'ಜ್ಞಾನ' ಎಂದಿಗೂ ಸಿಕ್ಕುವುದಿಲ್ಲ. ಶ್ರೀಕೃಷ್ಣನೂ ಗೀತೆಯಲ್ಲಿ ಹೇಳಿದ್ದಾನೆ—

**ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ ।**
**ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ ॥**

'ನಮಸ್ಕರಿಸುವುದರಿಂದಲೂ, ಪ್ರಶ್ನಿಸುವುದರಿಂದಲೂ, ಸೇವೆಮಾಡುವುದರಿಂದಲೂ ಜ್ಞಾನವನ್ನು ಪಡೆದುಕೊ. ತತ್ತ್ವವನ್ನು ಕಂಡಿರುವ ಜ್ಞಾನಿಗಳು ನಿನಗೆ ಅದನ್ನು ಉಪದೇಶಿಸುವರು." ಈ ಆತ್ಮ (ಜೀವಿ) ಪರಿಪೂರ್ಣ, ಸಚ್ಚಿದಾನಂದ ಸ್ವರೂಪಿ. ಇವನು ಸುಡಲಾಗದವನು, ಒಣಗದವನು, ಒದ್ದೆಯಾಗದವನು. ಎಲ್ಲದರಲ್ಲೂ ಇರುವವನು, ನಿತ್ಯನಾದವನು, ಸದಾಕಾಲ ಚಲಿಸದೇ ಇರುವವನು—ಎಂದು ಆತ್ಮಸ್ವರೂಪವನ್ನು ತಿಳಿದ ಮೇಲೆ ಜೀವಿಯು ಮತ್ತೆ ಈ ಸಂಸಾರವೆಂಬ ಬಾವಿಗೆ ಬೀಳುವುದಿಲ್ಲ. ಶ್ರುತಿ, ಸ್ಮೃತಿ, ಪುರಾಣ, ಇತಿಹಾಸ ಮೊದಲಾದ ಗ್ರಂಥಗಳನ್ನು ವಿಚಾರದ ಬೆಳಕಿನಲ್ಲಿ ಅಧ್ಯಯನ ಮಾಡಿ ಶ್ರೀಶಂಕರಾಚಾರ್ಯರು ಈ ವಿಷಯವನ್ನು ಖಚಿತವಾಗಿ ನಿರ್ಣಯಿಸಿರುವರು.

ಕಾಲಾನುಕ್ರಮದಲ್ಲಿ ಆ ಪರಂಪರೆಯಲ್ಲಿ ಬಂದ ಜನರು ಈ ಸತ್ಯದ ಜ್ಞಾನವನ್ನು ಅರಿಯದೆ ಹೋದರು. ಅದ್ವೈತ ಮಾರ್ಗದಲ್ಲಿರುವವರು ಒಳ್ಳೆಯ ಸಂಪ್ರದಾಯವುಳ್ಳವರ ಸಹವಾಸವನ್ನೂ, ಸಾಧನಚತುಷ್ಟಯದ ಅಭ್ಯಾಸವನ್ನೂ ಕಳೆದುಕೊಂಡರು. ಅವರಿಗೆ ಸತ್ಯದ ಅರಿವು ಸಿಗದೇ ಹೋಯಿತು. ಆ ಕಾರಣದಿಂದಲೇ ಭ್ರಮೆ, ಅಜ್ಞಾನ ಎಲ್ಲಾ ಹೆಚ್ಚಾಗಿ ಮಹಾವಾಕ್ಯಗಳಿಗೆ ವಿಪರೀತವಾದ ಬೇರೆಯೇ ಅರ್ಥವನ್ನು ಹೇಳುತ್ತಾ ಅವರು ಅವನತಿಗೆ ಒಳಗಾದರು. ಭಾಗಲಕ್ಷಣದ ಮೂಲಕ **ಅಹಂ ಬ್ರಹ್ಮಾಸ್ಮಿ, ತತ್ತ್ವಮಸಿ** ಮೊದಲಾದ ವಾಕ್ಯಗಳ ಅರ್ಥವನ್ನು ಸರಿಯಾಗಿ ನಿರ್ಣಯಿಸದೆ ಕೇವಲ ಪದಗಳ ಅರ್ಥವನ್ನು ಕಲ್ಪಿಸಿ ವಿರುದ್ಧಾರ್ಥಕ ವಿವರಣೆಯನ್ನು ನೀಡಲಾರಂಭಿಸಿದರು. (ವಾಕ್ಯಗಳಿಗೆ, ಪದಗಳಿಗೆ ಅರ್ಥವನ್ನು ಮಾಡುವ ವಿಧಾನಗಳಲ್ಲಿ 'ಲಕ್ಷಣಾ' ಎನ್ನುವುದು ಒಂದು ವಿಧ. ಅದರ ಪ್ರಭೇದಗಳಲ್ಲಿ 'ಭಾಗಲಕ್ಷಣಾ' ಕೂಡ ಒಂದು. ಇದರಲ್ಲಿ ಪದದಿಂದ ಬರುವ ಅರ್ಥದಲ್ಲಿ ಒಂದನ್ನು ಬಿಟ್ಟು ಒಂದನ್ನು ಉಳಿಸಿಕೊಳ್ಳಲಾಗುವುದು. ಆದ್ದರಿಂದ ಇದನ್ನು ಜಹದ್-ಅಜಹದ್ ಲಕ್ಷಣವೆಂದೂ ಕರೆಯುತ್ತಾರೆ. ಎಲ್ಲ ಅರ್ಥಗಳನ್ನೂ ಬಿಡದೆ ಒಂದನ್ನು ಉಳಿಸಿಕೊಳ್ಳುವುದು. ಉದಾ: ಅಗ್ನಿರ್ಮಾಣವಕಃ=ವಟುವು ಅಗ್ನಿ. ಬೆಂಕಿ ಎಂದಕೂಡಲೇ ಅದರ ಹೊಂಬಣ್ಣ, ಕವಲುಕವಲಾಗಿ ವ್ಯಾಪಿಸಿದ ಜ್ವಾಲೆ, ಬಿಸಿ, ತೇಜಸ್ಸು ಇವೆಲ್ಲಾ ಕಣ್ಣಮುಂದೆ ಬರುತ್ತವೆ. ಇಷ್ಟು ಅಂಶಗಳಲ್ಲಿ

ತೇಜಸ್ಸು ಒಂದನ್ನು ಉಳಿಸಿಕೊಂಡು ಉಳಿದವುಗಳನ್ನು ಬಿಟ್ಟುಬಿಡುವುದು ಭಾಗತ್ಯಾಗ. ಈ ತೇಜಸ್ಸಿಗೂ ವಟುವಿಗೂ ಸಂಬಂಧ ಇದೆ. ಅಂದರೆ ವಟು ಬೆಂಕಿಯ ಹಾಗೆ ತೇಜಸ್ವಿಯಾಗಿದ್ದಾನೆ ಎಂದು ಅರ್ಥವಾಗುತ್ತದೆ. ಈ ಕ್ರಮವನ್ನು ಅನುಸರಿಸಿ **ತತ್ ತ್ವಂ ಅಸಿ** ಮೊದಲಾದ ಮಹಾವಾಕ್ಯಗಳಿಗೆ ಆಚಾರ್ಯರು ಅರ್ಥ ತಿಳಿಸಿರುವರು. **ತತ್** – ಪದಶೋಧನೆ ಹಾಗೂ **ತ್ವಂ**–ಪದಶೋಧನೆಯ ಮೂಲಕ ಸರಿಯಾದ ಅರ್ಥವನ್ನು ತಿಳಿಯಲಾಗುತ್ತದೆ. **ತತ್**=ಪೂರ್ಣ ಚೈತನ್ಯವು (ಈಶ್ವರ) ಸಮಷ್ಟಿ ಅಜ್ಞಾನದೊಡನೆ ಸೇರಿದೆ. **ತ್ವಂ**=ಜೀವ, ಅದೂ ಚೈತನ್ಯವೇ. ಆದರೆ ಅದು ವ್ಯಕ್ತಿಯ (ವ್ಯಷ್ಟಿ) ಅಜ್ಞಾನದೊಡನೆ ಸೇರಿಕೊಂಡಿದೆ. ಈ ವ್ಯಷ್ಟಿ ಸಮಷ್ಟಿ ಅಜ್ಞಾನಗಳನ್ನು ಬಿಟ್ಟು ಚೈತನ್ಯವನ್ನು ಮಾತ್ರ ಗ್ರಹಿಸಿದಾಗ ಜೀವ, ಈಶ್ವರ ಎರಡೂ ಒಂದೇ ಆಗುತ್ತದೆ.)

ಕಾಲಾಂತರದಲ್ಲಿ ಜನರು ಒಂದೇ ಪದವನ್ನು ಹಿಡಿದು ವಿರುದ್ಧ ಅರ್ಥಗಳನ್ನು ಮಾಡಿದರು. ಮೂರೂವರೆ ಹಸ್ತ ಅಳತೆಯಿರುವ, ದುಃಖದಿಂದ ಕೂಡಿರುವ, ಅಜ್ಞಾನದಿಂದ ಉಂಟಾದ ಆಸಕ್ತಿಯೆಂಬ ಹಗ್ಗದಿಂದ ಕಟ್ಟಲ್ಪಟ್ಟಿರುವ, ನಾಮ ರೂಪಗಳಿಂದ ಕೂಡಿರುವ, ಸಂಸಾರಿಯನ್ನು ಅಕ್ಷರನೂ, ಅಸಂಗನೂ ಆದ ಪರಮಾತ್ಮನೆಂದು ತಿಳಿದರು. ವಿಧಿ-ನಿಷೇಧ (ಮಾಡಬೇಕಾದವು–ಮಾಡಬಾರದವು) ಎಂಬ ವಿವೇಕ ಕಳೆದುಕೊಂಡು ಅಮಾನವೀಯ ನಡತೆಯಿಂದ ನರರೂಪದ ಪಶುಗಳಾದರು. ಹುಟ್ಟು–ಸಾವುಗಳಿಂದ ಕೂಡಿದ ಸಂಸಾರದಿಂದ ಅವರನ್ನು ಉದ್ಧರಿಸಬೇಕೆಂದು ಲೋಕ ಗುರುವಾದ, ಜಗತ್ತಿಗೆ ತಂದೆಯಾದ ವಿಷ್ಣುವು ನಿಶ್ಚಯಿಸಿದನು.

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ॥

'ಧರ್ಮಕ್ಕೆ ತೊಂದರೆ ಉಂಟಾದಾಗ ಅಧರ್ಮವನ್ನು ನಾಶ ಮಾಡಿ, ಧರ್ಮವನ್ನು ಉದ್ಧರಿಸಲು ನಾನು ಹುಟ್ಟುತ್ತೇನೆ"— ಎಂಬ ತನ್ನ ಪ್ರತಿಜ್ಞೆಯನ್ನು ಸ್ಮರಿಸಿಕೊಂಡು, ಮಹಾಭೂತಪುರಿಯಲ್ಲಿ (ಶ್ರೀಪೆರಂಬದೂರು) ಶ್ರೀಮದ್ ರಾಮಾನುಜರ ರೂಪದಲ್ಲೂ, ಉಡುಪಿಯ (ಬಳಿಯ ಪಾಜಕ ಕ್ಷೇತ್ರದ)ಲ್ಲಿ ಶ್ರೀಮನ್ ಮಧ್ವಾಚಾರ್ಯರ ರೂಪದಲ್ಲೂ ಅವತಾರ ಎತ್ತಿದನು.

ನಿತ್ಯ–ಅನಿತ್ಯ ವಸ್ತು ವಿವೇಕವಿಲ್ಲದ, ಕೇವಲ ಇಹ–ಪರ ಲೋಕಗಳ ಭೋಗದಲ್ಲಿ ಮಾತ್ರ ಆಶೆ ಇರುವ, ಶಮದಮ ಮೊದಲಾದ ಆರು ವಿಧ ಸಂಪತ್ತುಗಳಿಲ್ಲದ, ಮೋಕ್ಷವನ್ನು ಹೊಂದಬೇಕೆಂಬ ಆಸೆಯೇ ಇಲ್ಲದ ಜನಸಮುದಾಯವನ್ನು ಈ ಇಬ್ಬರು ಆಚಾರ್ಯರು ನೋಡಿದರು. ಇವರಿಗೆ ಜೀವ–ಬ್ರಹ್ಮ ಐಕ್ಯವನ್ನು ತಿಳಿದುಕೊಳ್ಳುವ ಅರ್ಹತೆಯಿಲ್ಲ ಎಂದು ಗಮನಿಸಿ ಆಗ ಪ್ರಚಲಿತವಾಗಿದ್ದ ನಿರ್ಗುಣಬ್ರಹ್ಮ ಉಪಾಸನೆಯನ್ನು ಕಟುವಾಗಿ ತಿರಸ್ಕರಿಸಿದರು, ನಿಂದಿಸಿದರು, ಅಪಹಾಸ್ಯವನ್ನೂ ಮಾಡಿದರು.


ಶ್ರೀರಾಮಾನುಜಾಚಾರ್ಯರು

ಶ್ರೀಮದ್ ರಾಮಾನುಜರು 'ಈಶ್ವರ' ಅಥವಾ ಪರಬ್ರಹ್ಮ ಸದಾ ಕಾಲದಲ್ಲೂ 'ಚಿತ್' ಮತ್ತು 'ಅಚಿತ್'ಗಳನ್ನು ವಿಶೇಷಣಗಳಾಗಿ ಹೊಂದಿರುವನೆಂದು ಪ್ರತಿಪಾದಿಸಿದರು. (ಚಿತ್ ಜೀವಾತ್ಮವಾದರೆ ಅಚಿತ್ತು ಭೌತಿಕ ಜಗತ್ತು. ಜೀವ ಜಗತ್ತುಗಳಿಂದ ವಿಶಿಷ್ಟನಾಗಿರುವವನೇ ಈಶ್ವರ. ಜೀವ–ಜಗತ್ತು–ಈಶ್ವರ ಇವುಗಳ ಒಟ್ಟು ಮೊತ್ತವು ಪೂರ್ಣ ಹಾಗೂ ಅದ್ವಿತೀಯವೆಂಬುದು ರಾಮಾನುಜರ ಪ್ರತಿಪಾದನೆ. ಅಭಿನ್ನವಾದ ಜೀವ–ಜಗತ್ತುಗಳೆಂಬ ಅಂಶಗಳನ್ನು ಪೂರ್ಣವು ವಿಶೇಷಣವಾಗಿ ಹೊಂದಿರುವುದರಿಂದ ಇದನ್ನು ಸ್ವಗತ ಭೇದ ಎಂದು ಕರೆಯುತ್ತಾರೆ. ಇದೇ ಶ್ರೀರಾಮಾನುಜರ ವಿಶಿಷ್ಟಾದ್ವೈತ ಸಿದ್ಧಾಂತ. ಚಿದಂಶವಾದ ಪರಮಾತ್ಮನು 'ಆತ್ಮ'ನಂತೆ ಇದ್ದರೆ, ಜೀವಾತ್ಮರು ಹಾಗೂ ಜಡಾಂಶವಾದ ಜಗತ್ತು ಆತನ 'ಶರೀರ'ದಂತೆ ಇರುವುದು.) ಅವರ ತತ್ತ್ವವನ್ನು ಅನುಸರಿಸುವವರನ್ನು 'ವಿಶಿಷ್ಟಾದ್ವೈತಿಗಳು' ಎಂದು ಕರೆಯುತ್ತಾರೆ. ಇಲ್ಲಿ 'ವಿಷ್ಣು'ರೂಪ ಧರಿಸಿರುವ ಭಗವಂತನನ್ನು 'ಶೇಷಿನ್' ಎಂದು ಕರೆದಿರುವರು. (ಅಂದರೆ ಶೇಷ ಅಥವಾ ಭಾಗಗಳನ್ನು ಹೊಂದಿರುವವನು.) ಅವನು ಅನಂತ ಕಲ್ಯಾಣಗುಣಗಳಿಂದ ಕೂಡಿರುವನು. ಕೆಟ್ಟ ಗುಣಗಳಿಲ್ಲದವನು. ಪ್ರಪಂಚದ ಸೃಷ್ಟಿ ಸ್ಥಿತಿ ಲಯಗಳೆಂಬ ಎಲ್ಲಾ ಲೀಲೆಗಳನ್ನು ಹೊಂದಿರುವನು. ಚಿತ್ ಮತ್ತು ಅಚಿತ್ ಸಮಷ್ಟಿಯನ್ನು, ಅಂದರೆ, ಚತುರ್ಮುಖ ಬ್ರಹ್ಮನಿಂದ ಹಿಡಿದು ಜಡವಸ್ತುವಾದ ಒಂದು ಕಂಬದವರೆಗೂ ಭಗವಂತನ 'ಶೇಷ' (ಭಾಗ ಅಥವಾ ಅಂಶ) ಎನ್ನುವರು. ಈ ಶೇಷಗಳು ಮೋಹವಶರಾಗಿ ಸುಖವನ್ನು ಅನುಭವಿಸ

ಬೇಕೆಂಬ ಸಂಸ್ಕಾರದ ಕಾರಣದಿಂದಲೂ, ಭಗವಂತನ ಸೇವೆಯಿಂದ ಚ್ಯುತರಾಗಿ ಆಸೆಗಳ ಗುಲಾಮರಾಗಿ ಮತ್ತೆ ಮತ್ತೆ ಹುಟ್ಟುಸಾವುಗಳ ಸಂಸಾರಸಾಗರದಲ್ಲಿ ಬೀಳುತ್ತಾರೆ. ಇವರ ಒಳ್ಳೆಯ ಕರ್ಮ ಪಕ್ವಗೊಂಡಾಗ ಭಗವಂತನ ಕೃಪೆಯಿಂದ, ಕಾಮಕ್ಕೆ ದಾಸರಾಗಿರುವುದನ್ನು ಬಿಟ್ಟು ಭಗವಂತನ ದಾಸ್ಯವನ್ನು ಪಡೆದು, ಅಹಂಕಾರವನ್ನು ಕಳೆದುಕೊಂಡವರಾಗಿ ತಾವು ಅಣುವಿಗಿಂತಲೂ ಅಣುವೆಂದೂ, ಭಗವಂತನು ಮಹತ್ತಿಗಿಂತಲೂ ಮಹತ್ತಾದವನೆಂದೂ ತಿಳಿದು ಆತನಲ್ಲಿ ಭಕ್ತಿಯನ್ನು ಹೊಂದುತ್ತಾರೆ. ಮನಸ್ಸಿನಲ್ಲಿ ಸದಾ ಅವನನ್ನೇ ನೆನೆಯುತ್ತಾ, ಅವನ ವಿಷಯಗಳನ್ನೇ ಮಾತನಾಡುತ್ತಾ, ಅವನಿಗೆ ಸಂಬಂಧಿಸಿದ ಕೆಲಸಗಳನ್ನು ಮಾಡುತ್ತಾ ಪರಮಾನಂದ ಹೊಂದುತ್ತಾರೆ. ಆಗ—**ಮಾಮುಪೇತ್ಯ ತು ಕೌಂತೇಯ ಪುನರ್ಜನ್ಮ ನ ವಿದ್ಯತೇ**—ಎಂಬ ಭಗವಂತನ ಮಾತಿನಂತೆ ಮತ್ತೆ ಅವರು ('ಶೇಷ'ಗಳು) ಸಂಸಾರಸಾಗರಕ್ಕೆ ಬರುವುದಿಲ್ಲ.


ಶ್ರೀಮನ್ ಮಧ್ವಾಚಾರ್ಯರೂ ಕೂಡ ಭಗವಂತನ ದಾಸ್ಯವೇ ಎಲ್ಲಕ್ಕಿಂತಲೂ ಮಿಗಿಲಾದುದು ಎಂದೇ ಸ್ಪಷ್ಟಪಡಿಸಿ ರುವರು. ಚಿತ್, ಅಚಿತ್, ಈಶ್ವರ ಮತ್ತು ಅವುಗಳ ಸಂಬಂಧ — ಇವುಗಳು ನಿತ್ಯ ಎಂದು ಪ್ರತಿಪಾದಿಸಿರುವರು. ಆದರೆ ಚಿತ್ ಮತ್ತು ಅಚಿತ್ ಇವೆರಡು ಈಶ್ವರನಿಗೆ ವಿಶೇಷಣಗಳೆಂಬುದನ್ನು ಅವರು ಒಪ್ಪುವುದಿಲ್ಲ. ಇಂದ್ರಿಯಗಳ ಭೋಗದ ಬಯಕೆಯನ್ನೂ, ಮನಸ್ಸಿನ ಚಂಚಲತೆಯನ್ನೂ ನಿಗ್ರಹಿಸಿದಾಗ ಭಗವಂತನ ಕೃಪೆಯಾಗುವುದು. ಆಗ ಲೌಕಿಕ ಸುಖಗಳನ್ನು ಅನುಭವಿಸುವ ಆಸೆಯನ್ನೂ, ಕಾಮಕಿಂಕರತೆಯನ್ನೂ ಬಿಟ್ಟು ಭಗವಂತನ ದಾಸರಾಗುತ್ತಾರೆ. ಹೀಗೆ ಭಗವಂತನ ಸೇವೆ ಮಾಡುತ್ತ ಇರುವಾಗ ಎಲ್ಲಾ ದುಃಖಗಳೂ ಸಂಪೂರ್ಣ ನಾಶವಾಗಿ ಹೋಗುತ್ತವೆ. ಅಂತಹ ಭಾಗ್ಯವಂತರು ಪರಮ ಪುರುಷಾರ್ಥವಾದ ಮೋಕ್ಷಕ್ಕೆ ಹಕ್ಕುದಾರರಾಗುತ್ತಾರೆ. ಭಗವಂತನ ಪಾದಮೂಲವನ್ನು ಸೇರಿದಂತಹವರು ಮತ್ತೆ ಸಂಸಾರಕ್ಕೆ ಬರುವುದಿಲ್ಲ ಎಂಬುದು ಅವರ ಮತ.

**(ಮುಂದುವರಿಯುವುದು)**

**ಆಶ್ರಮದ ವಿಶೇಷ ಉತ್ಸವದ ದಿನಗಳು**

**ಜುಲೈ ೨೦೦೬**

| | | |
|---|---|---|
| ೦೭ | ಏಕಾದಶಿ | ಶುಕ್ರವಾರ |
| ೧೧ | ಶ್ರೀಗುರುಪೂರ್ಣಿಮಾ | ಮಂಗಳವಾರ |
| ೨೧ | ಏಕಾದಶಿ | ಶುಕ್ರವಾರ |
| ೨೩ | ಸ್ವಾಮಿ ರಾಮಕೃಷ್ಣಾನಂದ ಜಯಂತಿ | ಭಾನುವಾರ |



ಶ್ರೀಮಧ್ವಾಚಾರ್ಯರು

## ಅಪೂರ್ವ ಗುರುಭಕ್ತಿ

ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ರಾಮಕೃಷ್ಣಾನಂದರು ತಮ್ಮ ಅಪೂರ್ವ ಗುರುಭಕ್ತಿಗೆ ಹೆಸರಾಗಿದ್ದಾರೆ. ಅವರು ಚೆನ್ನೈಗೆ ಬಂದು ಹಲವಾರು ವರ್ಷಗಳ ಕಾಲ ಕಷ್ಟಪಟ್ಟು, ಮೈಲಾಪುರ ಎಂಬ ಬಡಾವಣೆಯಲ್ಲಿ ಮಠಕ್ಕಾಗಿ ಒಂದು ಕಟ್ಟಡವನ್ನು ಕಟ್ಟಿದರು. ಆದರೆ ದುರದೃಷ್ಟವಶಾತ್ ಆ ಕಟ್ಟಡವು ಕಟ್ಟಿದ ಎರಡೇ ವರ್ಷಗಳಲ್ಲಿ ಅನೇಕ ಕಡೆ ಬಿರುಕುಬಿಟ್ಟಿತು. ಮಳೆ ಬಂದಾಗ ಈ ಬಿರುಕುಗಳಿಂದ ನೀರು ಒಳಕ್ಕೆ ಸೋರುತ್ತಿತ್ತು. ಅಂತಹ ಸಮಯಗಳಲ್ಲಿ ರಾಮಕೃಷ್ಣಾನಂದರು ದೇವರ ಮನೆಗೆ ಹೋಗಿ ಅಲ್ಲಿ ಏನಾದರೂ ಸೋರುತ್ತಿದೆಯೇ ಎಂದು ನೋಡುತ್ತಿದ್ದರು. ಒಂದು ರಾತ್ರಿ ಮಳೆ ಬಂದಾಗ ಅಲ್ಲಿಯೂ ಸಹ ನೀರು ಶ್ರೀರಾಮಕೃಷ್ಣರ ಭಾವಚಿತ್ರದ ಮೇಲೆಯೇ ಸೋರಲು ಆರಂಭಿಸಿತು. ಸ್ವಾಮಿಗಳು ಒಂದು ಕೊಡೆ ಬಿಚ್ಚಿ ಹಿಡಿದುಕೊಂಡು ಇಡೀ ರಾತ್ರಿ ಕಳೆದು ಮಳೆ ನಿಲ್ಲುವವರೆಗೆ ಅಲ್ಲಿಯೇ ನಿಂತುಕೊಂಡಿದ್ದರು. ಅವರು ಭಾವಚಿತ್ರವನ್ನು ಸೋರದಿದ್ದ ಕಡೆಗೆ ತೆಗೆದಿಡಲಿಲ್ಲ—ಏಕೆಂದರೆ ಹಾಗೆ ಮಾಡಿದರೆ ಅಕಾಲದಲ್ಲಿ ಶ್ರೀರಾಮಕೃಷ್ಣರ ನಿದ್ರೆಗೆ ಭಂಗ ಉಂಟುಮಾಡಿದಂತಾಗುತ್ತದೆಯಲ್ಲವೆ!